International Journal of Kannada Research
www.kannadajournal.com

**ISSN: 2454–5813**
IJKR 2023; 9(2): 191-195
© 2023 IJKR
www.kannadajournal.com
Received: 05-03-2023
Accepted: 11-04-2023

**ಶೈಲೇಶ್‌ಕುಮಾರ್.ಸಿ**
ಸಹಾಯಕ ಪ್ರಾಧ್ಯಾಪರು,
ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ
ಪ್ರಥಮ ದರ್ಜೆ ಕಾಲೇಜು,
ಹನೂರು, ಕರ್ನಾಟಕ, ಭಾರತ

**Corresponding Author:**
**ಶೈಲೇಶ್‌ಕುಮಾರ್.ಸಿ**
ಸಹಾಯಕ ಪ್ರಾಧ್ಯಾಪರು,
ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ
ಪ್ರಥಮ ದರ್ಜೆ ಕಾಲೇಜು,
ಹನೂರು, ಕರ್ನಾಟಕ, ಭಾರತ

# ಏಕರೂಪ ನಾಗರಿಕ ಸಂಹಿತೆ: ಲಿಂಗ ನ್ಯಾಯದ ಕಡೆಗೆ

**ಶೈಲೇಶ್‌ಕುಮಾರ್.ಸಿ**

**DOI:** https://doi.org/10.22271/24545813.2023.v9.i2c.971

**ಸಂಕ್ಷಿಪ್ತ ಪರಿಚಯ**
ಏಕರೂಪ ನಾಗರಿಕ ಸಂಹಿತೆಯ ಪರಿಕಲ್ಪನೆಯುಜಾಗತಿಕ ಸಂದರ್ಭದಲ್ಲಿಬಹುಸಾಂಸ್ಕೃತಿಕ ಸಮಾಜಗಳಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಸಾಧ್ಯವಿರುವ ಒಂದು ಪ್ರಧಾನ ಸಾಧನವಾಗಿದೆ.ಈ ಬಗೆಗಿನ ಮಹತ್ವದ ವಿಚಾರಧಾರೆಯಲ್ಲಿನ ಪ್ರಧಾನ ಅಂಶಗಳನ್ನುಪ್ರಸ್ತುತ ಲೇಖನವುತಳಸ್ಪರ್ಶಿಯಾಗಿ ಪರಿಶೀಲಿಸುತ್ತದೆ.ಭಾರತದಂತಹ ಬಹುತ್ವದ ರಾಷ್ಟ್ರದಲ್ಲಿ ಈ ಏಕರೂಪ ನಾಗರಿಕ ಸಂಹಿತೆಯನ್ನು ಕಾರ್ಯಗತಗೊಳಿಸುವುದು ಬಹುಹಿಂದಿನಿಂದಲೂ ಸಹ ಒಂದು ಪ್ರಧಾನ ಮತ್ತು ಮಹತ್ವದ ಚರ್ಚಾ ವಿಷಯವಾಗಿದೆ.ಏಕೆಂದರೆ, ವಿಶೇಷವಾಗಿ ವೈಯಕ್ತಿಕ ಮತ್ತು ವಿಭಿನ್ನ ಕಾನೂನುಗಳ ಇತಿಹಾಸ ಹೊಂದಿರುವ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಮತ್ತು ನಮ್ಮ ಬಹುತ್ವದ ಭಾರತದಲ್ಲಿಯೂ ಮಹಿಳಾ ಸಂಬಂಧಿತವಾದ ಹಕ್ಕುಗಳು, ಸಾಮಾಜಿಕ ನ್ಯಾಯ ಮತ್ತು ಲಿಂಗ ಸಮಾನತೆಯಂತಹ ಪ್ರಧಾನ ವಿಚಾರಧಾರೆಗಳಆಧಾರದ ಮೇಲೆ ಈ ಏಕರೂಪ ನಾಗರಿಕ ಸಂಹಿತೆಯು ಬೀರಿರುವ ಪರಿಣಾಮಗಳನ್ನು ಸ್ಥೂಲವಾಗಿಯೇ ಪ್ರಸ್ತುತ ಲೇಖನದಲ್ಲಿ ದಾಖಲಿಸಲಾಗಿದೆ. ಇದರಲ್ಲಿ ಬಹುಮುಖ್ಯವಾಗಿ ಕಾನೂನಿನ ಚೌಕಟ್ಟುಗಳು, ಸಾಮಾಜಿಕ ದೃಷ್ಟಿಕೋನಗಳು ಮತ್ತು ಅಂತರರಾಷ್ಟ್ರೀಯ ಅಭ್ಯಾಸಗಳನ್ನು ಮೌಲ್ಯೀಕರಿಸುವ ಮೂಲಕ ಲಿಂಗ ನ್ಯಾಯವನ್ನು ಮುನ್ನಡೆಸುವಲ್ಲಿ ಏಕೈಕ ಸಂಹಿತೆಯಾಗಿರುವ ಈ ಏಕರೂಪ ನಾಗರಿಕ ಸಂಹಿತೆಯ ಕಾರ್ಯಚಟುವಟಿಕೆಯ ಬಗೆಗೆ ಸಂಪೂರ್ಣವಾಗಿ ತಿಳುವಳಿಕೆಯನ್ನು ನೀಡಲು ಈ ಲೇಖನವು ರಚಿತಗೊಂಡಿರುತ್ತದೆ.

**ಪ್ರಧಾನ ಪದಗಳು :** ಸಾಂವಿಧಾನಿಕ ಅಂಶಗಳು, ಕಾನೂನಿನ ನಿಯಮ, ಸಾಮಾಜಿಕ ನ್ಯಾಯ, ಏಕರೂಪ ನಾಗರಿಕ ಸಂಹಿತೆ, ನಾಗರಿಕ ಹಕ್ಕುಗಳು, ಮಾನವ ಹಕ್ಕುಗಳು, ಮೂಲಭೂತ ಹಕ್ಕುಗಳು, ಲಿಂಗ ನ್ಯಾಯ, ಶಾಸನಗಳು, ಹಿಂದೂ, ಮುಸ್ಲಿಂ, ಕ್ರೈಸ್ತ ಮತ್ತು ಪಾರ್ಸಿ ಕಾನೂನುಗಳು.

**ಪೀಠಿಕೆ**

ಇಡೀ ಜಗತ್ತಿನಲ್ಲೆಯೇ ಬಹುಸಂಸ್ಕೃತಿಯನ್ನುಹೊಂದಿರುವ ನಮ್ಮ ಭಾರತ ದೇಶವುಮಹಿಳೆಯರ ಜನಸಂಖ್ಯೆಯಲ್ಲಿ ಸಿಂಹ ಪಾಲು ಹೊಂದಿದೆ.ವಿಶೇಷವಾಗಿಇದೇ ಮಹಿಳೆಯರಿಗೆ ಸಂಬಂಧಿಸಿದಂತೆ; ಹಿಂದೂ ವಿವಾಹ ಕಾಯಿದೆ, ಪಾರ್ಸಿ ವಿವಾಹ ಕಾಯಿದೆ, ಕ್ರಿಶ್ಚಿಯನ್ ವಿವಾಹ ಕಾಯಿದೆ, ಮುಸ್ಲಿಂ ವೈಯಕ್ತಿಕ ಕಾನೂನು ಮತ್ತು ವಿಚ್ಛೇದನ ಕಾಯಿದೆಯಂತಹ ಹಲವು ಹತ್ತು ಕೌಟುಂಬಿಕ ಕಾನೂನುಗಳನ್ನು ಹೊಂದಿದೆ. 1954ರ ಭಾರತೀಯ ವಿಶೇಷ ವಿವಾಹ ಕಾಯಿದೆಯಡಿಯಲ್ಲಿ ಯಾವುದೇ ವ್ಯಕ್ತಿಯುತಾನು ಆಚರಿಸುವ ಮತ್ತು ಹೊಂದಿರುವಂತಹ ನಂಬಿಕೆಯನ್ನು ಲೆಕ್ಕಿಸದೆ ಯಾರಾದರೂ ಸಹ ವಿವಾಹವನ್ನು ನಿರ್ವಹಿಸಬಹುದು.ಆದರೆ, ವಿಶೇಷವಾಗಿ ಹಿಂದೂಗಳಿಗೆ ಮತ್ತು ಮುಸ್ಲಿಮರಿಗೆ ಕೆಲವು ವಿಭಿನ್ನ ವೈಯಕ್ತಿಕ ಕಾನೂನುಗಳಿವೆ. ಹಿಂದೂ ವಿವಾಹದ ಕಾನೂನನ್ನುನಮ್ಮ ಭಾರತ ದೇಶದಲ್ಲಿ ಪರಮೋಚ್ಚ ಅಧಿಕಾರವನ್ನು ಹೊಂದಿರುವ ಸಂಸತ್ತು ಬಹುಮತದ ಆಧಾರದ ಮೇಲೆ ರಚಿಸುತ್ತದೆ. ಹೀಗೆ ರಚಿತಗೊಂಡಿರುವಹೀಗೆ, ರಚಿರಗೊಂಡಿರುವ ಶಾಸನಗಳ ಮೂಲಕ ಗಣನೀಯವಾಗಿ ಆಧುನೀಕರಣ ಮತ್ತು ಜಾತ್ಯಾತೀತತೆಯನ್ನು ಹೆಚ್ಚು ಹೆಚ್ಚು ಅನುಭವಿಸಿರುತ್ತದೆ.ಆದರೆ, ಮುಸ್ಲಿಂ ಕಾನೂನು ಮಾತ್ರ ಸಾಂಪ್ರದಾಯಿಕವಾಗಿ ಮತ್ತು ಬದಲಾಗದೆ ಉಳಿದಿದೆ ಎಂಬುದು ಸಹ ತಿಳಿದುಬಂದಿರುತ್ತದೆ.

ಭಾರತ ದೇಶವು ತನ್ನ ಒಡಲಿನಲ್ಲಿ ಶಾಸನಬದ್ಧ ಮತ್ತು ಶಾಸನಬದ್ಧವಲ್ಲದ ಹಲವು ಹತ್ತು ಕೌಟುಂಬಿಕ ಕಾನೂನುಗಳನ್ನು ಸಹ ಹೊಂದಿದೆ.ಅಂದರೆ;ನಮ್ಮ ದೇಶದಲ್ಲಿನ ಪ್ರತಿಯೊಂದು

ಧಾರ್ಮಿಕತೆಯಜನಸಮುದಾಯವು ತಮ್ಮ ತಮ್ಮ ಮದುವೆಗೆ ಸಂಬಂಧಿಸಿದಂತೆ ತಮ್ಮದೇ ಆದ ವಿಭಿನ್ನ ನಿಯಮಾವಳಿಗಳನ್ನು ಹೊಂದಿದೆ.ಹಾಗಾಗಿಯೇ ಏಕರೂಪತೆಯಲ್ಲಿನ ಸಮಾನತೆಯ ಶಾಸನವು ತಾರತಮ್ಯತೆಯನ್ನು ನಿವಾರಣೆ ಮಾಡಿ, ಆ ಮೂಲಕಜಾತ್ಯಾತೀತತೆಯನ್ನು ಪ್ರಧಾನವಾಗಿ ಸಾಧಿಸುವುದೇ ಆಗಿರುತ್ತದೆ.ಈ ಸಲುವಾಗಿಯೇನಮ್ಮ ಭಾರತೀಯ ಸಂವಿಧಾನದ ನಾಲ್ಕನೆಯ ಭಾಗದಲ್ಲಿನನಲವತ್ತಾಲ್ಕನೆಯಅನುಚ್ಛೇದದ ಪ್ರಕಾರ;ಪ್ರತಿಯೊಬ್ಬನಾಗರಿಕರಿಗೆ ಏಕರೂಪ ನಾಗರಿಕ ಸಂಹಿತೆಯನ್ನುಇಡೀ ದೇಶಾದ್ಯಂತ ಜಾರಿಗೆ ತರಲು ರಾಜ್ಯವು ಪ್ರಯತ್ನಿಸಬೇಕು.ಹಾಗೆಯೇ, ಮೂವತ್ತೆಳನೆಯಅನುಚ್ಛೇದ ಪ್ರಕಾರ; ರಾಜ್ಯ ನೀತಿ ನಿರ್ದೇಶ ತತ್ವಗಳನ್ನು ರಾಜ್ಯವು ಅನುಷ್ಠಾನಕ್ಕೆ ತರದಿದ್ದಾಗ, ನ್ಯಾಯಾಲಯದಲ್ಲಿ ಪ್ರಶ್ನಿಸುವ ಹಕ್ಕಿಲ್ಲದಿದ್ದರೂ ದೇಶದ ಆಡಳಿತಕ್ಕೆ ಮೂಲಭೂತ ನಿಯಮಗಳಾಗಿವೆ. ರಾಜ್ಯವು ಯಾವುದೇ ಕಾನೂನುಗಳನ್ನು ರೂಪಿಸುವಾಗ ಈ ತತ್ವಗಳನ್ನು ಅಳವಡಿಸಬೇಕು ಎಂದು ಕಡ್ಡಾಯವಾಗಿಯೇ ಹೇಳುತ್ತದೆ.

**ಏಕರೂಪ ನಾಗರಿಕ ಸಂಹಿತೆ ಮತ್ತು ಲಿಂಗ ಸಮಾನತೆ –** ಏಕರೂಪ ನಾಗರಿಕ ಸಂಹಿತೆಯು ಲಿಂಗ ಸಮಾನತೆಯ ನ್ಯಾಯವನ್ನು ಹೆಚ್ಚು ಹೆಚ್ಚು ಖಾತರಿಪಡಿಸುತ್ತದೆ.ಈ ಏಕರೂಪ ನಾಗರಿಕ ಸಂಹಿತೆಗೆಯಾವುದೇ ಬದಲಾವಣೆಗಳನ್ನು ಮಾಡಿದರೂ ಸಹಅದು ಧಾರ್ಮಿಕ ಸ್ವಾತಂತ್ರ್ಯದಲ್ಲಿ ಯಾವುದೇ ಹಸ್ತಕ್ಷೇಪ ಮಾಡಬಾರದು.ಏಕೆಂದರೆ, ನಮ್ಮ ದೇಶದಲ್ಲಿನ ಕಾನೂನು ಆಯೋಗವು ಸಮಕಾಲೀನ ಸಂದರ್ಭದಲ್ಲಿ ಅನೇಕ ವ್ಯಕ್ತಿಗಳಿಂದ ಈ ವಿಷಯದ ಬಗೆಗೆಮಾಹಿತಿಯನ್ನು ಸಂಗ್ರಹಿಸುತ್ತಿದೆ.ಆದರೆ,ಇದರ ಹಿಂದಿರುವ ಮೂಲಭೂತ ಪ್ರಶ್ನೆಯೆಂದರೆ;ಏಕರೂಪ ನಾಗರಿಕ ಸಂಹಿತೆಯ ಸುಧಾರಣೆ ಮತ್ತು ಧಾರ್ಮಿಕ ಸ್ವಾತಂತ್ರ್ಯವು ಸಹಬಾಳ್ವೆ ನಡೆಸಬಹುದೇ ಅಥವಾ ಇಲ್ಲವೇ?ಎಂಬುದೇ ಆಗಿರುತ್ತದೆ.ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಮುಂದಿನ ಎರಡು ಸಂಭಾವ್ಯ ಕ್ರಮಗಳನ್ನು ಗ್ರಹಿಸಲಾಗಿದೆ.ಆ ಎರಡು ಸಂಭಾವ್ಯ ಕ್ರಮಗಳೆಂದರೆ;

**ಮೊದಲನೆಯ ಕ್ರಮ –** ಪ್ರತಿಯೊಂದು ವೈಯಕ್ತಿಕ ಕಾನೂನುಗಳನ್ನು ಕ್ರೋಢೀಕರಿಸಬೇಕು.

**ಎರಡನೆಯ ಕ್ರಮ –** ಮೂಲಭೂತ ಹಕ್ಕುಗಳ ಅನುಸರಣೆಗೆ ತರಬೇಕು.

ಹೀಗೆ, ಏಕರೂಪ ನಾಗರಿಕ ಸಂಹಿತೆಯು ಪ್ರತಿಯೊಂದು ವೈಯಕ್ತಿಕ ಕಾನೂನುಗಳನ್ನು ಹೊಸಹೊಸ ಶಾಸನದೊಂದಿಗೆ ಬದಲಾಯಿಸುತ್ತದೆ.ಅಖಿಲ ಭಾರತೀಯ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು ಇತ್ತೀಚೆಗೆ ಭಾರತದ ಕಾನೂನು ಆಯೋಗದ ವಿಚಾರಣೆಗೆ ಪ್ರತಿಕ್ರಿಯಿಸುವುದರಿಂದ ದೂರವಿದ್ದು, ಏಕರೂಪ ನಾಗರಿಕ ಸಂಹಿತೆಯೊಂದಿಗಿನ ಅವರ ಅತೃಪ್ತಿಯನ್ನು ಹೆಚ್ಚಿನದಾಗಿಯೇ ಸೂಚಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿನಮ್ಮ ದೇಶದಲ್ಲಿನ ಹಿಂದೂ ಮಹಾಸಭಾ, ಆರ್‌ಎಸ್‌ಎಸ್ ಮತ್ತು ವಿಶ್ವಹಿಂದೂ ಪರಿಷತ್‌ನ ಸಂಘಟನೆಗಳುಏಕರೂಪ ನಾಗರಿಕ ಸಂಹಿತೆಯನ್ನು ಹೆಚ್ಚು ಹೆಚ್ಚು ಬೆಂಬಲಿಸಲು ಧ್ವನಿಯೆತ್ತಿವೆ. ಆದ್ದರಿಂದ, ವಿವಿಧ ಸಂಸ್ಥೆಗಳು ಏಕರೂಪ ನಾಗರಿಕ ಸಂಹಿತೆಯ ಬಗೆಗೆಒಮ್ಮತದ ಒಪ್ಪಂದವನ್ನು ಹೊಂದಿರುವುದಿಲ್ಲ ಎಂಬುದು ಕಂಡುಬರುತ್ತದೆ.

ಏಕರೂಪ ನಾಗರಿಕ ಸಂಹಿತೆಯು ಹಲವು ಹತ್ತು ವೈಯಕ್ತಿಕ ಕಾನೂನುಗಳೊಂದಿಗೆ ಶಾಂತಿಯುತವಾಗಿಯೇ ಸಹಬಾಳ್ವೆಯನ್ನು ನಡೆಸುತ್ತದೆ.ಅಂದರೆ, ಇಬ್ಬರೂ ಅಥವಾ ಅವರವರ ಆಯ್ಕೆಗಳಿಗಾಗಿಯೇ ಇಬ್ಬರೂ ನಿಲ್ಲುವುದಿಲ್ಲ. ಆದ್ದರಿಂದಲೇ ಇದನ್ನು ಅನುಮೋದಿಸಿದರೆ, ವಿಶೇಷ ವಿವಾಹ ಕಾಯಿದೆಯಂತೆಯುಏಕರೂಪ ನಾಗರಿಕ ಸಂಹಿತೆಯ ಒಂದು ಆಯ್ಕೆಯಾಗಿದೆ. ಇದನ್ನು ಸಂವಿಧಾನದ ಇಪ್ಪತ್ತೈದನೆಯ ಅನುಚ್ಛೇದದ ಪ್ರಕಾರ; ಸಾರ್ವಜನಿಕ ಶಿಸ್ತು, ನೀತಿ ಮತ್ತು ನೈರ್ಮಲ್ಯ ಹಾಗೂ ಸಂವಿಧಾನದ ಮೂರನೆಯ ಭಾಗದ ಇತರ ನಿಯಮಗಳನ್ನು ಗಮನದಲ್ಲಿಟ್ಟು; ಪ್ರತಿಯೊಬ್ಬ ವ್ಯಕ್ತಿಗಳಿಗೂ ಆತ್ಮಸಾಕ್ಷಿ ಸ್ವಾತಂತ್ರ್ಯ ಹೊಂದಲು ಮತ್ತು ಸ್ವತಂತ್ರವಾಗಿ ಧರ್ಮವನ್ನು ಅನುಸರಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವಂತಹ ಹಕ್ಕನ್ನು ಹೊಂದಿರುತ್ತಾರೆ.ಇಪ್ಪತ್ತಾರನೆಯಅನುಚ್ಛೇದ ಪ್ರಕಾರ;ಸಾರ್ವಜನಿಕ ಶಿಸ್ತು, ನೀತಿ ಮತ್ತು ನೈರ್ಮಲ್ಯಕ್ಕೆ ಒಳಪಟ್ಟು ಪ್ರತಿಯೊಂದು ಧಾರ್ಮಿಕ ಸಂಸ್ಥೆಯು ಧಾರ್ಮಿಕ ಮತ್ತು ಚಾರಿಟೆಬಲ್ ಉದ್ದೇಶಗಳಿಗೆ ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ಅದನ್ನು ನಿರ್ವಹಿಸುವುದು; ತನ್ನ ಧರ್ಮದ ವಿಷಯವನ್ನು ಮೇಲ್ವಿಚಾರಣೆ ಮಾಡುವುದು; ಚರ ಮತ್ತು ಸ್ಥಿರ ಆಸ್ತಿಯನ್ನು ರಕ್ಷಿಸುವುದು ಮತ್ತು ಸಂಪಾದಿಸುವು ಮತ್ತು ಆಸ್ತಿಯನ್ನು ಕಾನೂನಿಗೆ ಅನುಸಾರ ನಿರ್ವಹಿಸುವುದು. ಹೀಗೆ; ಈ ಅನುಚ್ಛೇದಗಳ ಅಡಿಯಲ್ಲಿ ಸಂರಕ್ಷಿಸಲಾಗಿದೆ.ಅದೇನೇ ಇದ್ದರೂ ಸಹಈ ಎರಡೂ ತುಣುಕುಗಳು ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ, ಆರೋಗ್ಯ ಮತ್ತು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ವಿಷಯಗಳ ಮೇಲೆ ಸ್ಪರ್ಶಿಸುತ್ತವೆ. ಇದರ ಕಾರಣ ಮತ್ತು ಪರಿಣಾಮವಾಗಿ; ಜಾತಿಯ ಪೂರ್ವಾಗ್ರಹ, ಬಹುಪತ್ನಿತ್ವ, ತ್ರಿವಳಿ ತಲಾಖ್ ಮತ್ತು ಸತಿಯಂತಹ ಸಂಪ್ರದಾಯಗಳು ಕಾನೂನುಬಾಹಿರವಾಗಬಹುದು.

ಏಕರೂಪ ನಾಗರಿಕ ಸಂಹಿತೆ ಮತ್ತು ಲಿಂಗ ನ್ಯಾಯದ ನಡುವೆ ನಿಕಟ ಸಂಬಂಧವಿದೆ. ಸ್ವಾತಂತ್ರ್ಯ, ಜಾತ್ಯತೀತತೆ ಮತ್ತು ಧರ್ಮವು ಸೇರಿದಂತೆ ಹಲವು ಹತ್ತು ಆಧುನಿಕ ಸಂದರ್ಭದಲ್ಲಿನ ಸಮಸ್ಯೆಗಳು ಲಿಂಗ ನ್ಯಾಯ ಮತ್ತು ಆ ಬಗೆಯಲ್ಲಿನ ಸಮಾನತೆಗೆ ಹೆಚ್ಚು ಅಡ್ಡಿಯಾಗುತ್ತಿವೆ. ಆದ್ದರಿಂದಲೇ ವೈಯಕ್ತಿಕ ಕಾನೂನುಗಳು ಮಹಿಳೆಯರ ವಿರುದ್ಧ ತಾರತಮ್ಯ ಮಾಡುವ ಹಲವು ಹತ್ತು ನಿಬಂಧನೆಗಳನ್ನು ಹೊಂದಿವೆ. ನಮ್ಮ ದೇಶದಲ್ಲಿ ಮಹಿಳೆಯರ ಹಕ್ಕುಗಳು ಮತ್ತು ಅವರ ಆ ಬಗೆಯಲ್ಲಿನ ಹಿತಾಸಕ್ತಿಗಳನ್ನು ಸಂರಕ್ಷಿಸಲು ಏಕರೂಪ ನಾಗರಿಕ ಸಂಹಿತೆಯ ಅಗತ್ಯವಿದೆ. ಹೆಚ್ಚುವರಿಯಾಗಿ; ಸಂವಿಧಾನದ ನಲವತ್ತನಾಲ್ಕನೆಯ ವಿಧಿಯು ಏಕರೂಪ ನಾಗರಿಕ ಸಂಹಿತೆಯನ್ನು ಕಾರ್ಯಗತಗೊಳಿಸಲು ಮಾರ್ಗಸೂಚಿಗಳನ್ನು ಸಹ ಒದಗಿಸಿದೆ. ಪ್ರತಿಯೊಬ್ಬ ಭಾರತೀಯ ನಾಗರಿಕರುಇಲ್ಲಿನ ಜಾತಿಯನ್ನು ಲೆಕ್ಕಿಸದೆ, ನಮ್ಮ ದೇಶದಲ್ಲಿ ಏಕರೂಪವಾಗಿ ಅನ್ವಯಿಸುವ ಏಕರೂಪ ನಾಗರಿಕ ಸಂಹಿತೆಯಿಂದ ಏಕೆ ಒಳಗೊಳ್ಳಬಾರದು? ಯಾವುದೇ ಗುಂಪುಗಳಿಗೆ ಯಾವುದೇ ವೈಯಕ್ತಿಕ ಕಾನೂನು ಒಂದೇ ಆಗಿರುವುದಿಲ್ಲ. ಏಕೆಂದರೆ, ವಿವಿಧ ಗುಂಪುಗಳು ವಿಭಿನ್ನ ಕಾನೂನುಗಳಿಗೆ ಒಳಪಟ್ಟಿರುತ್ತವೆ. ಅವುಗಳೆಂದರೆ;

- **ಭಾರತೀಯ ವಿಚ್ಛೇದನ ಕಾಯಿದೆ–1869 –** ಭಾರತದಲ್ಲಿ ವಿಚ್ಛೇದನ ನಿಯಮಗಳು ಮತ್ತು ಕಾರ್ಯವಿಧಾನವು ದಂಪತಿಗಳ ಸಮುದಾಯಕ್ಕೆ ಅನುಗುಣವಾಗಿ ಬದಲಾಗುತ್ತದೆ.
- **ಭಾರತೀಯಕ್ರಿಶ್ಚಿಯನ್ ಉತ್ತರಾಧಿಕಾರತ್ವ ಕಾಯಿದೆ–1925**–ಈ ಕಾಯಿದೆಯು ಭಾರತದಲ್ಲಿ ಕ್ರಿಶ್ಚಿಯನ್ನರಲ್ಲಿ ಆಸ್ತಿಯ ಹಂಚಿಕೆಯನ್ನು ನಿಯಂತ್ರಿಸುವ ಕಾನೂನು ಚೌಕಟ್ಟಿನಲ್ಲಿ ಒಂದು ಮೂಲಾಧಾರವಾಗಿದೆ.
- **ಪಾರ್ಸಿಗಳ ಕಾಯಿದೆ–1936 –** ಪಾರ್ಸಿಗಳ ವಿವಾಹವನ್ನು ಆಶೀರ್ವಾದದ ಧಾರ್ಮಿಕ ಸಮಾರಂಭದ ಮೂಲಕ ಒಪ್ಪಂದವೆಂದು ಪರಿಗಣಿಸಲಾಗುತ್ತದೆ.

- **ಭಾರತೀಯ ಕ್ರಿಶ್ಚಿಯನ್ ವಿವಾಹ ಕಾಯಿದೆ–1989** – ಭಾರತೀಯ ಕ್ರಿಶ್ಚಿಯನ್ನರ ಕಾನೂನುಬದ್ಧ ವಿವಾಹಕ್ಕಾಗಿ ಭಾರತದ ಸಂಸತ್ತು ರೂಪಿಸಿರುವ ಕಾಯಿದೆಯಾಗಿದೆ.
- **ಹಿಂದೂ ಕಾನೂನು–1955 ಮತ್ತು 1956** –ಹಿಂದೂಗಳು ಮತ್ತು ಇತರರಲ್ಲಿ ವಿವಾಹಕ್ಕೆ ಸಂಬಂಧಿಸಿ ಕಾನೂನನ್ನು ತಿದ್ದುಪಡಿ ಮಾಡುವುದು ಮತ್ತು ಕ್ರೋಢೀಕರಿಸುವುದು ಈ ಕಾಯಿದೆಯ ಮುಖ್ಯ ಉದ್ದೇಶವಾಗಿದೆ.

ಈ ಮೇಲಿನ ಕಾನೂನುಗಳ ಮೂಲಕತನ್ನದೇ ಆದಂತಹ ಕ್ರೋಢೀಕರಣವನ್ನು ಕಂಡಿತು.ಅದಕ್ಕೂ ಮೊದಲು, ಹಿಂದೂಗಳು ಬಹುಪತ್ನಿತ್ವವನ್ನು ಹೊಂದುವ ಸಾಧ್ಯತೆ ಹೆಚ್ಚಿತ್ತು.

ಪ್ರಧಾನವಾಗಿ ನಮ್ಮ ಭಾರತದಲ್ಲಿನ ಹಿಂದೂ ಕಾನೂನಿನ ಪ್ರಕಾರ; ನಮ್ಮ ದಕ್ಷಿಣ ಭಾರತದ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳು ಮಾತ್ರ ಮಹಿಳೆಯು ಇವುಗಳಿಗೆ ಸಹಪಾಠಿಯಾಗಬಹುದು.ಆದರೆ, ಇದರ ಜೊತೆಗೆಯೇ ವಿಭಜನೆಯ ಸಮಯದಲ್ಲಿ ಹಿಂದೂ ಪುರುಷರಿಗೆ ಸಮಾನವಾದ ಹಕ್ಕುಗಳನ್ನು ಹಿಂದೂ ಮಹಿಳೆಯರಿಗೆ ನೀಡಲಾಗಿಲ್ಲ. ಮಹಿಳೆಯು ಕಾನೂನುಬದ್ಧ ಉತ್ತರಾಧಿಕಾರಿಯಾಗಿದ್ದರೂ ಸಹ, ವಾಸದ ಮನೆ ಪ್ರಕರಣಗಳಲ್ಲಿ ಆಕೆಯು ವಿಭಜನೆಯನ್ನು ಪಡೆಯಲು ಸಾಧ್ಯವಿಲ್ಲ. ಮದುವೆಯಾದ ಹಿಂದೂ ಮಹಿಳೆಯರಿಗೆ ಸರ್ವೇಸಾಮಾನ್ಯವಾಗಿ ಸ್ವಂತವಾಗಿ ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಅನುಮತಿಸಲಾಗುವುದಿಲ್ಲ. ತನ್ನ ಗಂಡನ ಜೀವನದುದ್ದಕ್ಕೂ ಆಕೆಯು ಅವರ ನೈಸರ್ಗಿಕ ರಕ್ಷಕನಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ಹೀಗೆ ಹೇಳುವುದಾದರೆ; ಹಿಂದೂ ಕಾನೂನನ್ನು ಕ್ರೋಢೀಕರಿಸಿದ ಅನಂತರವೂ ಸಹ ಮಹಿಳೆಯರ ವಿರುದ್ಧ ತಾರತಮ್ಯ ಮಾಡುವ ಹಲವು ಹತ್ತು ನಿಬಂಧನೆಗಳು ಮುಂದುವರಿದಿವೆ.

ಭಾರತೀಯ ಸಂದರ್ಭದ ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ಬೆಳಕಿಗೆ ತಂದ ಭಾರತೀಯ ಉತ್ತರಾಧಿಕಾರ ಕಾಯಿದೆಯಲ್ಲಿನ ತಾರತಮ್ಯದ ನಿಬಂಧನೆಗಳ ಪ್ರಕಾರ; ಚಾರಿಟಬಲ್ ಅಥವಾ ಧಾರ್ಮಿಕ ಟ್ರಸ್ಟ್‌ಗಳಿಗೆ ಯಾವುದೇ ಆಸ್ತಿಯನ್ನು ಬಿಡಲು ಕ್ರಿಶ್ಚಿಯನ್ನರಿಗೆ ಅನುಮತಿ ಇಲ್ಲ. ಇತರ ವೈಯಕ್ತಿಕ ಕಾನೂನುಗಳಿಗೆ ಹೋಲಿಸಿದರೆ; ಮುಸ್ಲಿಂ ಕಾನೂನಿನ ಅಡಿಯಲ್ಲಿ ಮಹಿಳೆಯರ ಸ್ಥಾನಮಾನವು ಗಣನೀಯವಾಗಿ ಹೇಳಿಕೊಳ್ಳುವಂತಹ ಮಟ್ಟದಲ್ಲಿಲ್ಲ. ಅರೇಬಿಕ್ ಯುಗದ ಮೊದಲು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಮುಸ್ಲಿಂ ಮಹಿಳೆಯರು,ತಮ್ಮದೇ ಮುಸ್ಲಿಂ ಪುರುಷರಿಗಿಂತ ಕಡಿಮೆ ಸ್ಥಾನಮಾನವನ್ನು ಹೊಂದಿದ್ದರು. ಮುಸ್ಲಿಂ ಮಹಿಳೆಯರಿಗೆ ಗೌರವಾನ್ವಿತ ಸ್ಥಾನಮಾನದ ಜೊತೆಗೆ ಖುರಾನ್ ಎಲ್ಲ ರೀತಿಯಲ್ಲೂ ಸಮಾನ ಹಕ್ಕುಗಳನ್ನು ನೀಡಿದೆ.ಆದಾಗ್ಯೂ, ಮುಸ್ಲಿಂ ಮಹಿಳೆಯರಿಗೆ ಈಗಲೂ ಕುರಾನ್‌ನಲ್ಲಿ ವಿವರಿಸಿರುವ ಸಮಾನ ಹಕ್ಕುಗಳಿಗೆ ಪ್ರವೇಶವಿಲ್ಲ. ಇದಕ್ಕೆ ಮುಖ್ಯ ಕಾರಣ ಮುಸ್ಲಿಂ ಕಾನೂನಿನಲ್ಲಿ ಕ್ರೋಢೀಕರಣ ಇಲ್ಲದಿರುವುದು.ಇದರ ಕಾರಣ ಮತ್ತು ಪರಿಣಾಮವಾಗಿಯೇ ವಿವಿಧ ಉಪಗುಂಪುಗಳು ಇಸ್ಲಾಮಿಕ್ ಕಾನೂನಿನ ವೈವಿಧ್ಯಮಯ ವ್ಯಾಖ್ಯಾನಗಳನ್ನು ಹೊಂದಿವೆ.ಮುಸ್ಲಿಂ ಪುರುಷನಿಗೆ ನಾಲ್ಕು ಬಾರಿ ಮದುವೆಯಾಗಲು ಅವಕಾಶವಿದೆ.ಬಹುಪತ್ನಿತ್ವವನ್ನು ಇಸ್ಲಾಮಿಕ್ ಕಾನೂನಿನಿಂದ ಅನುಮತಿಸಲಾಗುತ್ತದೆ.ಹಾಗೆಯೇ, ಹೆಚ್ಚುವರಿಯಾಗಿ ಮುಸ್ಲಿಂ ಶಿಯಾ ಸಮುದಾಯವು ಮುತ್ತ ವಿವಾಹಗಳನ್ನು ಗುರುತಿಸುತ್ತದೆ.ಅವುಗಳು ಕ್ಷಣಿಕ ಒಕ್ಕೂಟಗಳಾಗಿವೆ. ಆದಾಗ್ಯೂ, ವಿಚ್ಛೇದನಕ್ಕೆ ಬಂದಾಗ ಮುಸ್ಲಿಂ ಮಹಿಳೆಯರ ಪರಿಸ್ಥಿತಿಗಳು ಅತ್ಯಂತ ಕೆಟ್ಟದಾಗಿದೆ.ತಲಾಖ್–ಎ–ಬಿದ್ದತ್ ಎಂದು ಕರೆಯಲ್ಪಡುವ ತ್ವರಿತ ರೀತಿಯ ತಲಾಖ್‌ಅನ್ನು ಸುನ್ನಿ ಸಮುದಾಯಗಳಲ್ಲಿ ಗುರುತಿಸಬಹುದು.ಈ ವೇಳೆ ಪತಿ ಸತತ ಮೂರು ಬಾರಿ ಹೇಳಿದ ತಕ್ಷಣ ತಲಾಖ್ ಜಾರಿಯಾಗಿದೆ.ಇದು ತಲಾಖ್‌ನ ಬದಲಾಯಿಸಲಾಗದ ರೂಪವಾಗಿದೆ.ಇಸ್ಲಾಂ ಧರ್ಮದ ಪ್ರಧಾನ ಪ್ರತಿಪಾದಕರಾದಂತಹ ಪ್ರವಾದಿ ಮಹಮ್ಮದನು ಇದನ್ನು ಒಪ್ಪಲಿಲ್ಲವಾದರೂ, ಬಹುಪಾಲು ಮುಸ್ಲಿಂ ಪುರುಷರು ಇದನ್ನು ಅನುಸರಿಸುತ್ತಾರೆ.ಏಕೆಂದರೆ, ವಿವಿಧ ವಿದ್ವಾಂಸರು ಮುಸ್ಲಿಂ ಕಾನೂನಿನ ವಿಭಿನ್ನ ವ್ಯಾಖ್ಯಾನಗಳನ್ನು ನೀಡಿದ್ದಾರೆ.ಆದ್ದರಿಂದ, ಮಹಿಳೆಯರ ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿಯೇ ನಮ್ಮ ರಾಷ್ಟ್ರದಲ್ಲಿ ಈ ಮಾದರಿಯ ಏಕರೂಪ ನಾಗರಿಕ ಸಂಹಿತೆಯನ್ನು ತಕ್ಷಣವೇ ಜಾರಿಗೆ ತರಬೇಕು. ಮುಸ್ಲಿಂ ಪುರುಷರು ಮುಸ್ಲಿಂ ಮಹಿಳೆಗಿಂತಲೂ ಎರಡು ಪಟ್ಟು ಹೆಚ್ಚು ಆಸ್ತಿಯನ್ನು ಉತ್ತರಾಧಿಕಾರದ ವಿಷಯಗಳಲ್ಲಿಯೂ ಪಡೆಯಬಹುದು.ಮುಸ್ಲಿಂ ಮಹಿಳೆಯು ಜೀವನಾಂಶಕ್ಕೆ ಅರ್ಹಳಾಗಿದ್ದರೆ, ಇದ್ದತ್ ಅವಧಿಯ ಅನಂತರ ಅದನ್ನು ಪಡೆಯುವುದನ್ನು ಮುಂದುವರಿಸಲು ಸಾಧ್ಯವಿಲ್ಲ. ಬಹುಮುಖ್ಯವಾಗಿ ಧಾರ್ಮಿಕ ನಂಬಿಕೆಗಳಿಂದಾಗಿಯೇಭಾರದ ದೇಶದಲ್ಲಿನ ಏಳು ದಶಕಗಳ ಸ್ವಾತಂತ್ರ್ಯದ ಹೊರತಾಗಿಯೂ ಮಹಿಳೆಯರು ಲಿಂಗ ತಾರತಮ್ಯದ ವಿರುದ್ಧ ಹೋರಾಡುತ್ತಲೇ ಇದ್ದಾರೆ.ಭಾರತದಲ್ಲಿ ಮಹಿಳೆಯರು ತಮ್ಮ ಧರ್ಮದ ಆಧಾರದ ಮೇಲೆ ತಾರತಮ್ಯವನ್ನು ಎದುರಿಸುತ್ತಿದ್ದಾರೆ.ಆದಾಗ್ಯೂ, ಮಹಿಳೆಯರ ಈ ಲಿಂಗ ನ್ಯಾಯದ ಮೂಲಕ ಸಮಾನತೆಯತ್ತ ಪ್ರಗತಿಪರ ಹೆಜ್ಜೆಯನ್ನು ಪ್ರತಿನಿಧಿಸುತ್ತವೆ. ಲಿಂಗ ಸಮಾನತೆಯನ್ನು ಉತ್ತೇಜಿಸುವುದು ಈ ಏಕರೂಪ ನಾಗರಿಕ ಸಂಹಿತೆಯ ಮತ್ತೊಂದು ಪ್ರಾಥಮಿಕ ಗುರಿಯಾಗಿದೆ.

ಮುಸ್ಲಿಂ ಮಹಿಳೆಯರನ್ನು ಒಳಗೊಂಡ ಹಲವು ಹತ್ತು ವಿವಾಹ ಪ್ರಕರಣಗಳ ವಿಚಾರಣೆಯ ಅನಂತರ, ನಮ್ಮ ದೇಶದಲ್ಲಿನ ಸರ್ವೋಚ್ಚ ನ್ಯಾಯಾಲಯವು ಅನೇಕ ಅವಲೋಕನಗಳನ್ನು ಕೂಡ ಮಾಡಿತು.ಹಾಗಾಗಿಯೇ, ನಮ್ಮ ರಾಷ್ಟ್ರದಲಿಏಕರೂಪ ನಾಗರಿಕ ಸಂಹಿತೆಯಅನ್ವಯವನ್ನು ತನಿಖೆ ಮಾಡಲು ಇದು ಪ್ರಸ್ತುತ ಆಡಳಿತವನ್ನು ನಿಯಮಿತವಾಗಿ ನೆನಪಿಸುತ್ತದೆ.ಏಕರೂಪ ನಾಗರಿಕ ಸಂಹಿತೆಯನ್ನು ರಾಷ್ಟ್ರವ್ಯಾಪಿ ಜಾರಿಗೊಳಿಸುವುದು ಕಾರ್ಯಸಾಧ್ಯವೇ ಎಂಬುದನ್ನು ನಿರ್ಣಯಿಸಲು ಪ್ರಸ್ತುತ ಸರ್ಕಾರವು ಕಾನೂನು ಆಯೋಗವನ್ನು ಕೇಳಿರುವುದು ಸಹ ಒಂದು ಹೊಸ ಮೈಲಿಗಲ್ಲೇ ಆಗಿದೆ.ನಮ್ಮ ರಾಷ್ಟ್ರದಲ್ಲಿ ಏಕರೂಪ ನಾಗರಿಕ ಸಂಹಿತೆಯಅನುಪಸ್ಥಿತಿಯ ಪ್ರಮುಖ ಕಾರಣವೆಂದರೆ; ರಾಜಕೀಯ ಒಮ್ಮತದ ಕೊರತೆಯಾಗಿರುತ್ತದೆ.ಹಾಗೆಯೇ, ಈ ಏಕರೂಪ ನಾಗರಿಕ ಸಂಹಿತೆಯನ್ನು ಬೆಂಬಲಿಸಿದರೆ; ಅಲ್ಪಸಂಖ್ಯಾತರ ಮತಬ್ಯಾಂಕ್‌ಗಳನ್ನು ಕಳೆದುಕೊಳ್ಳುವ ಭಯದಲ್ಲಿ ಬಹಳಷ್ಟು ರಾಜಕೀಯ ಪಕ್ಷಗಳು ಇದ್ದವು ಇದಕ್ಕೆ ಕಾರಣವಾಗಿರುತ್ತದೆ.ಇದರ ಕಾರಣ ಮತ್ತು ಪರಿಣಾಮವಾಗಿಯೇ ಹಲವಾರು ರಾಜಕೀಯ ಪಕ್ಷಗಳು ಈ ಏಕರೂಪ ನಾಗರಿಕ ಸಂಹಿತೆಯನ್ನು ಟೀಕಿಸುತ್ತವೆ ಬಂದಿರುವುದನ್ನು ಸಹ ಗುರುತಿಸಬಹುದು.ಆದರೂ ಸಹ ಯಾರೂ ಊಹಿಸಲು ಸಾಧ್ಯವಾಗದಂತಹ ಕೆಟ್ಟ ಸಂಭವನೀಯ ಕೋಮು ನಡವಳಿಕೆಗಳಲ್ಲಿ ತೊಡಗಿವೆ. ಇಸ್ಲಾಂ ಧರ್ಮವನ್ನು ಹೊರತುಪಡಿಸಿ; ನಮ್ಮ ದೇಶದಲ್ಲಿನ ಪ್ರತಿಯೊಂದು ಧರ್ಮವು ತನ್ನ ವೈಯಕ್ತಿಕ ಕಾನೂನುಗಳನ್ನು ವಿವಿಧ ಸಾಮಾಜಿಕ ಸುಧಾರಣೆಗಳನ್ನು ಪ್ರತಿಬಿಂಬಿಸುತ್ತದೆ.ಯುಗಯುಗಾಂತರಗಳಲ್ಲಿ ಬದಲಾಗದೇ ಇರುವುದು ಮುಸ್ಲಿಂ ಕಾನೂನು ಮಾತ್ರವೇ ಆಗಿರುತ್ತದೆ.

ಭಾರತೀಯ ಸಂದರ್ಭಧ ಅಲ್ಪಸಂಖ್ಯಾತರು, ಅದರಲ್ಲೂ ವಿಶೇಷವಾಗಿ ಮುಸ್ಲಿಮರು, ಯಾವಾಗಲೂ ಈ ಏಕರೂಪ ನಾಗರಿಕ ಸಂಹಿತೆಯನ್ನು ಪ್ರಬಲವಾಗಿಯೇ ವಿರೋಧಿಸುತ್ತಾರೆ.ಏಕೆಂದರೆ, ಮುಸ್ಲಿಂ ವೈಯಕ್ತಿಕ ಕಾನೂನುಗಳು ಖುರಾನ್‌ನಿಂದ ಹುಟ್ಟಿಕೊಂಡಿರುವುದರಿಂದ ಮತ್ತು ಸಂಸತ್ತಿನಿಂದ

ಜಾರಿಗೊಳಿಸಲಾಗಿಲ್ಲ.ಖಾಸಗಿ ಸಂಸ್ಥೆಯುಅಖಿಲ ಭಾರತೀಯ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಕಲೆಯ ಹೇಳಿಕೆಯ ಪ್ರಕಾರ; ನಮ್ಮ ದೇಶದಲ್ಲಿನ ಸರ್ವೋಚ್ಚ ನ್ಯಾಯಾಲಯವುಇವುಗಳ ಮೇಲೆ ಹೆಚ್ಚಿನ ನ್ಯಾಯಿಕ ವ್ಯಾಪ್ತಿಯನ್ನು ಹೊಂದಿಲ್ಲ.ಆದ್ದರಿಂದಲೇ ನಮ್ಮ ಭಾರತೀಯ ಸಂವಿಧಾನದ 13ನೆಯ ಅನುಚ್ಛೇದವುಈ ಮುಸ್ಲಿಂ ಕಾನೂನಿಗೆ ಅನ್ವಯಿಸಲಾಗುವುದಿಲ್ಲ. ಏಕೆಂದರೆ, ಅದು ಮುಸ್ಲಿಂ ಕಾನೂನಿನ ಧಾರ್ಮಿಕ ವಿಷಯವಾಗಿದೆ ಮತ್ತು ಅದು ಮಾನವ ನಿರ್ಮಿತ ಕಾನೂನಿನ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಹೇಳುತ್ತದೆ.

ಆದರೆ, ಅನೇಕ ಇಸ್ಲಾಮಿಕ್ ರಾಷ್ಟ್ರಗಳು ಶರಿಯತ್ ಆಧಾರದ ಮೇಲೆ ಏಕೀಕೃತ ಕಾನೂನುಗಳನ್ನು ಹೊಂದಿವೆ. ಹಾಗೆಯೇ, ಮುಸ್ಲಿಮರು ಮತ್ತು ಮುಸ್ಲಿಮೇತರರು ಇಬ್ಬರೂ ಅದಕ್ಕೆ ಒಳಪಟ್ಟಿರುತ್ತಾರೆ.ಈ ರಾಷ್ಟ್ರಗಳು ತಮ್ಮ ಮುಸ್ಲಿಂ ಗುರುತಿನ ಬಗೆಗೆ ಹೆಚ್ಚು ಹೆಮ್ಮೆಪಡುತ್ತವೆ. ಆದರೆ, ಭಾರತೀಯ ಮುಸ್ಲಿಮರು ಅದೇ ನಾಗರಿಕ ಕಾನೂನುಗಳಿಗೆ ಒಳಪಟ್ಟರೆ, ಅವರೆಲ್ಲರೂ ಮುಸ್ಲಿಮರಾಗುವುದನ್ನು ನಿಲ್ಲಿಸುತ್ತಾರೆ ಎಂಬ ಅಖಿಲ ಭಾರತೀಯ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಅತ್ಯಂತ ಕಾಳಜಿಯ ಹಿಂದಿನ ಕಾರಣವೇನು?ಇತರ ಇಸ್ಲಾಮಿಕ್ ರಾಷ್ಟ್ರಗಳಿಗಿಂತಲೂ ಭಿನ್ನವಾಗಿ ಅವರ ಕ್ರಿಮಿನಲ್ ಕಾನೂನುಗಳು ಷರಿಯತ್ ಕಾನೂನಿನಿಂದ ಪಡೆಯಲ್ಪಟ್ಟಿಲ್ಲದ ಕಾರಣವಾಗಿದೆ.ಅವರು ಹೋಲಿಸಬಹುದಾದ ನಾಗರಿಕ ಮತ್ತು ಅಪರಾಧಿ ಕಾನೂನುಗಳಿಗೆ ಒಳಪಟ್ಟಿದ್ದರೆ, ಯಾವ ಸಮಸ್ಯೆ ಇರುತ್ತದೆ?ಈ ಪ್ರಶ್ನೆಗಳಿಗೆ ಉತ್ತರ ಸಿಕ್ಕಾಗ ಮಾತ್ರವೇ ಇದರ ಮೂಲ ಕಾರಣವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ.

ಅಖಿಲ ಭಾರತೀಯ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯುಒಂದು ಖಾಸಗಿ ಸಂಸ್ಥೆಯಾಗಿದೆ.ಇದು ಭಾರತೀಯ ಮುಸ್ಲಿಂರ ವೈಯಕ್ತಿಕ ಕಾನೂನುಗಳನ್ನು ರಕ್ಷಿಸಲು ಮತ್ತು ಪ್ರಧಾನವಾಗಿ ಭಾರತೀಯ ಸರ್ಕಾರದೊಂದಿಗೆ ಸಂಪರ್ಕ ಸಾಧಿಸಲು ಮತ್ತು ಪ್ರಭಾವ ಬೀರಲು, ನಿರ್ಣಾಯಕ ವಿಷಯಗಳ ಬಗೆಗೆ ಸಾಮಾನ್ಯ ಜನರಿಗೆ ಮಾರ್ಗದರ್ಶನ ನೀಡಲು ಕೆಲಸ ಮಾಡುತ್ತಿದೆ. ಈ ಸಂಸ್ಥೆ ಮತ್ತು ಇತರ ಹಲವು ಹತ್ತು ಕಾನೂನು ತಜ್ಞರು ಏಕರೂಪ ನಾಗರಿಕ ಸಂಹಿತೆಯ ಅರ್ಜಿಯನ್ನು ಕುರಿತು ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯುವ ಪ್ರಯತ್ನದಲ್ಲಿ ಇದೆ. ಆದರೆ, ಇಂದಿನ ಕಾನೂನು ಆಯೋಗವು ಇತ್ತೀಚೆಗೆ ಪೋಸ್ಟ್ ಮಾಡಿದ ಈ ಮಾದರಿಯ ಪ್ರಶ್ನಾವಳಿಯನ್ನು ತೀವ್ರವಾಗಿ ವಿರೋಧಿಸಿತ್ತು ಎಂಬುದು ಸಹ ಕಂಡುಬರುತ್ತದೆ.ಹಾಗಾಗಿಯೇ ಇತರ ಧಾರ್ಮಿಕ ಸಮುದಾಯಗಳ ಖಾಸಗಿ ಕಾನೂನುಗಳು ನಿರ್ಲಕ್ಷಿಸಲ್ಪಡುವ ತಾರತಮ್ಯದ ಆಚರಣೆಗಳನ್ನು ಒಳಗೊಂಡಿರುವಾಗಬಹುಮುಖ್ಯವಾಗಿ; ಮುಸ್ಲಿಂ ಕಾನೂನಿನ ಮೇಲೆ ಕೇಂದ್ರೀಕರಿಸಲಾಗಿದೆ ಎಂಬ ವಾದವನ್ನು ಮುಂದಿಡಲಾಗಿದೆ.ಮುಸ್ಲಿಂ ಸಮುದಾಯವು ಉದ್ದೇಶಿತ ಗುರಿಯಾಗಿದೆ ಎಂದು ಅವರಿಗೆ ತೋರುತ್ತದೆ ಮತ್ತು ಮುಸ್ಲಿಂ ಕಾನೂನು ಅದರ ಧನಾತ್ಮಕ ಗುಣಲಕ್ಷಣಗಳಿಗಿಂತ ಅದರ ನಕಾರಾತ್ಮಕ ಗುಣಲಕ್ಷಣಗಳನ್ನು ಒತ್ತಿಹೇಳುತ್ತದೆ.ಸಂದರ್ಶನವೊಂದರಲ್ಲಿ ಪ್ರಖ್ಯಾತ ಕಾನೂನು ವಿದ್ವಾಂಸ ಫ್ಲಾವಿಯಾ ಆಗ್ನೆಸ್ ಅವರು ವರದಕ್ಷಿಣೆ ಸಾವುಗಳಂತಹ ಹಿಂದೂ ಕಾನೂನಿನ ಹಾನಿಕಾರಕ ಅಂಶಗಳತ್ತ ಹೆಚ್ಚು ಗಮನ ಸೆಳೆಯಲು ಪ್ರಶ್ನಾವಳಿ ವಿಫಲವಾಗಿದೆ ಎಂದು ಹೇಳಿದ್ದಾರೆ.ಯಾವುದೇ ವಿಷಯವನ್ನು ಇದ್ದ ರೀತಿಯಲ್ಲಿ ತರುವುದು ಸೂಕ್ತವಲ್ಲ ಎಂದು ಅವರು ಹೇಳಿದ್ದಾರೆ.ಕರಡು ಸಿದ್ಧಪಡಿಸುವ ಮೊದಲು ಸಂವಾದ ನಡೆಸಬೇಕು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಒಪ್ಪಿಗೆ ಪಡೆದ ಅನಂತರ ಅದನ್ನು ಸಂಬಂಧಿತ ವ್ಯಕ್ತಿಗಳಿಗೆ ಪ್ರಸ್ತುತಪಡಿಸಬೇಕು ಎಂದು ಅವರು ವಿವರಿಸಿದರು. ವಿಭಿನ್ನ ರೀತಿಯಲ್ಲಿಈ ಎಲ್ಲಾ ವೈಯಕ್ತಿಕ ಕಾನೂನುಗಳು ಮಹಿಳೆಯರ ವಿರುದ್ಧ ತಾರತಮ್ಯ ಮಾಡುತ್ತವೆ ಎಂದು ಅವರು ಹೇಳಿದರು.ಅವರ ಪ್ರಕಾರ; ಹಿಂದೂ ವಿವಾಹ ಕಾಯಿದೆಯು ಕನ್ಯಾದಾನದಂತಹ ಏಳು ಆಚರಣೆಗಳು ತಾರತಮ್ಯದಿಂದ ಕೂಡಿವೆ. ಮದುವೆಯ ಅನಂತರ, ಮಹಿಳೆಯರನ್ನು ಹಿಂದೂ ಕಾನೂನಿನಡಿಯಲ್ಲಿ ಪರಾಯ ಧನ ಎಂದು ಪರಿಗಣಿಸಲಾಗುತ್ತದೆ.ಇದು ತಾರತಮ್ಯವಾಗಿದೆ ಎಂದು ಅವರು ಬಹಿರಂಗಪಡಿಸಿದರು.

ಭಾರತದಲ್ಲಿನ ಅಲ್ಪಸಂಖ್ಯಾತ ಗುಂಪುಗಳು, ಅದರಲ್ಲೂ ವಿಶೇಷವಾಗಿ ಮುಸ್ಲಿಮರು, ಏಕರೂಪ ನಾಗರಿಕ ಸಂಹಿತೆಯ ಬಗೆಗೆ ನಿರಂತರವಾಗಿ ಆ ಬಗೆಯಲ್ಲಿನ ಅಸಮಾಧಾನವನ್ನು ಹೊಂದಿದ್ದಾರೆ.ಆದ್ದರಿಂದಲೇ ಭಾರತೀಯ ಅಲ್ಪಸಂಖ್ಯಾತರನ್ನು ಅಪರಾಧ ಮಾಡುವ ವೆಚ್ಚದಲ್ಲಿ ಈ ಸೂಕ್ಷ್ಮವಾದ ವಿಷಯವನ್ನು ತರುವುದು ಅವಿವೇಕದ ಸಂಗತಿಯಾಗಿದೆ.ಮೊದಲು ಮುಸ್ಲಿಂ ವೈಯಕ್ತಿಕ ಕಾನೂನನ್ನು ಕ್ರೋಢೀಕರಿಸಬೇಕು.ಸಮುದಾಯದ ಹಿಂದುಳಿದಿರುವಿಕೆ ಮತ್ತು ಮುಸ್ಲಿಂ ನಾಯಕತ್ವದ ಶೌರ್ಯ ಮತ್ತು ಭಯದ ಕೊರತೆಯು ಮುಸ್ಲಿಂ ವೈಯಕ್ತಿಕ ಕಾನೂನಿನ ಸುಧಾರಣೆಗೆ ಮುಖ್ಯ ಅಡೆತಡೆಗಳಾಗಿವೆ. ಹೀಗಾಗಿ, ಅಲ್ಪಸಂಖ್ಯಾತ ಸಮುದಾಯಗಳ ಅಭಿಪ್ರಾಯಗಳನ್ನು ಖಚಿತಪಡಿಸಿಕೊಳ್ಳಲುಕಾಲಾನುಕ್ರಮದಲ್ಲಿ ಆಳುವ ಘನ ಸರ್ಕಾರಗಳು ಅಲ್ಲಿ ಜನಾಭಿಪ್ರಾಯ ಸಂಗ್ರಹಿಸಬೇಕು.ಏಕರೂಪ ನಾಗರಿಕ ಸಂಹಿತೆಯನ್ನು ಅನುಷ್ಠಾನಕ್ಕೆ ತರಲು ಅನುಕೂಲಕರ ವಾತಾವರಣವನ್ನು ಬೆಳೆಸಲು ನಮ್ಮ ಭಾರತೀಯ ಸಂವಿಧಾನದಲ್ಲಿನ ನಲವತ್ತನಾಲ್ಕನೆಯ ಅನುಚ್ಛೇದವುಹೆಚ್ಚಿನ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಲು ಸರ್ಕಾರವು ಸಾರ್ವಜನಿಕರನ್ನು ಪ್ರೋತ್ಸಾಹಿಸಬೇಕು. ವಿದೇಶಿ ಕಾನೂನುಗಳನ್ನು ಜಾರಿಗೊಳಿಸುವುದರಿಂದ ಅಲ್ಪಸಂಖ್ಯಾತರನ್ನು ರಕ್ಷಿಸಲು ಬಯಸುವ ಸರ್ಕಾರವು ಈ ಬಗೆಗೆ ಅವರಿಗೆ ಭರವಸೆ ನೀಡಬೇಕು. ಹಾಗೆಯೇ ಸಂವಿಧಾನದ ಇಪ್ಪತ್ತೈದು ಮತ್ತು ಇಪ್ಪತ್ತಾರನೆಯ ವಿಧಿಗಳನ್ನು ಪರಿಗಣಿಸದೆ ಸರ್ಕಾರವು ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಇದಕ್ಕೆ ಹೆಚ್ಚುವರಿಯಾಗಿ;ಇದೇ ನಲವತ್ತನಾಲ್ಕನೆಯ ಅನುಚ್ಛೇದದ ಕಾನೂನುಬದ್ಧತೆ ಮತ್ತು ಜಾರಿಗೊಳಿಸುವಿಕೆಯನ್ನು ಮೌಲ್ಯಮಾಪನ ಮಾಡಬೇಕು. ಅಂತಹ ಕ್ರಮಗಳನ್ನು ಅಳವಡಿಸಿಕೊಂಡರೆ, ಅನಂತರ ಭಾರತದಲ್ಲಿ ಯಾವುದೇ ಸಮಸ್ಯೆಯಿಲ್ಲದೆ ಇದೇ ನಲವತ್ತನಾಲ್ಕನೆಯಅನುಚ್ಛೇದವನ್ನು ಹೆಚ್ಚು ಕಾರ್ಯಗತಗೊಳಿಸಲಾಗುತ್ತದೆ.

**ಅಂತಿಮ ಸಾರಾಂಶ** – ಪ್ರಸ್ತುತ, ನಮ್ಮ ರಾಷ್ಟ್ರದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಹೇರುವ ಯಾವುದೇ ಪ್ರಯತ್ನವನ್ನು ವಿರೋಧಿಸುವ ಏಕೈಕ ಗುಂಪು ಮುಸ್ಲಿಂ ಸಮುದಾಯವಾಗಿದೆ.ಅವರ ದೃಷ್ಟಿಯಲ್ಲಿಈ ಏಕರೂಪ ನಾಗರಿಕ ಸಂಹಿತೆಯು ಅವರ ಧರ್ಮವನ್ನು ಆಚರಿಸುವ ಹಕ್ಕನ್ನು ಆಕ್ರಮಣ ಮಾಡುತ್ತಿದೆ.ಅನೇಕ ಇತರ ಇಸ್ಲಾಮಿಕ್ ದೇಶಗಳು ಹಾಗೆ ಮಾಡಿದರೂ, 1930ರ ದಶಕದಲ್ಲಿ ಅಂಗೀಕರಿಸಲ್ಪಟ್ಟ ತಮ್ಮ ಖಾಸಗಿ ಕಾನೂನುಗಳನ್ನು ಭಾರತೀಯ ಮುಸ್ಲಿಮರು ಏಕೆ ತಿದ್ದುಪಡಿ ಮಾಡಲು ಸಾಧ್ಯವಿಲ್ಲ?ಸಂವಿಧಾನವು ಭಾರತದಲ್ಲಿ ಅತ್ಯುನ್ನತ ಕಾನೂನು, ಜಾತ್ಯತೀತ ರಾಷ್ಟ್ರವಾಗಿದೆ.ನಮ್ಮ ಭಾರತೀಯ ಸಂವಿಧಾನವು ವೈಯಕ್ತಿಕ ಕಾನೂನನ್ನು ಮೀರಿಸುತ್ತದೆ.ಅದು ಎಷ್ಟೇ ಪವಿತ್ರವಾಗಿದ್ದರೂ ಸಹ ರಾಷ್ಟ್ರದಲ್ಲಿ ಕ್ರೋಢೀಕರಿಸಿದ ನಾಗರಿಕ

ಕಾನೂನು ವ್ಯವಸ್ಥೆಯನ್ನು ಜಾರಿಗೆ ತರಬೇಕೆ, ಭಾರತೀಯ ಮುಸ್ಲಿಮರು ಈಗಾಗಲೇ ಜಾತ್ಯತೀತ ಅಪರಾಧಿ ಸಂಹಿತೆಯು ಅಸ್ತಿತ್ವದಲ್ಲಿದ್ದರೆ, ಅದನ್ನು ವಿರೋಧಿಸಬಾರದು.ಅದು ಷರಿಯಾತ್ ಕಾನೂನಲ್ಲದಿದ್ದರೂ ಅವರು ಗುರುತಿಸುತ್ತಾರೆ.

ಏಕರೂಪ ನಾಗರಿಕ ಸಂಹಿತೆಯ ನಮ್ಮ ರಾಷ್ಟ್ರಕ್ಕೆ ನಿರ್ಣಾಯಕವಾಗಿದೆ.ಏಕೆಂದರೆ, ಅದು ಲಿಂಗ ಸಮಾನತೆ ಮತ್ತು ನ್ಯಾಯವನ್ನು ಮುನ್ನಡೆಸುತ್ತದೆ. ಹೆಚ್ಚುವರಿಯಾಗಿ, ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವಂತೆ, ಇದು ಸಮಗ್ರತೆ ಮತ್ತು ಏಕತೆಯನ್ನು ಎತ್ತಿಹಿಡಿಯುತ್ತದೆ. ಆದಾಗ್ಯೂ, ಇದನ್ನು ಸಾಧಿಸುವ ಮೊದಲು ಭಾರತೀಯ ಸಂವಿಧಾನದ ನಲವತ್ತನಾಲ್ಕನೆಯಅನುಚ್ಛೇದವನ್ನು ಜಾರಿಗೊಳಿಸಬೇಕು.ಭಾರತದಲ್ಲಿ ವಿವಿಧ ಧಾರ್ಮಿಕ ಸಮುದಾಯಗಳು ಮದುವೆವಾಗಿದೆ. ದತ್ತು ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ನಾಗರಿಕ ಕಾನೂನು ಪದ್ಧತಿಗಳನ್ನು ಹೊಂದಿವೆ. ಈ ಸಮುದಾಯಗಳಲ್ಲಿ ಹಿಂದೂ, ಮಹಮ್ಮದೀಯ, ಕ್ರಿಶ್ಚಿಯನ್ ಮತ್ತು ಪಾರ್ಸಿ ಸಮುದಾಯಗಳು ಸೇರಿವೆ. ಆದಾಗ್ಯೂ, ದೇಶದ ಎಲ್ಲಾ ಧಾರ್ಮಿಕ ಗುಂಪುಗಳಿಗೆ ಅನ್ವಯಿಸುವ ಒಂದೇ ಕುಟುಂಬ ಕಾನೂನು ಭಾರತದಲ್ಲಿ ಇಲ್ಲ. ಪ್ರತಿಯೊಬ್ಬ ವ್ಯಕ್ತಿಯು ಅವರು ಅರ್ಹವಾದ ಘನತೆಯನ್ನು ಪಡೆಯುತ್ತಾರೆ ಎಂದು ಖಚಿತಪಡಿಸಿಕೊಳ್ಳುವುದು ಏಕರೂಪ ನಾಗರಿಕ ಸಂಹಿತೆಯ ಪ್ರಾಥಮಿಕ ಗುರಿಯಾಗಿದೆ. ಪ್ರತಿಯೊಬ್ಬ ಮನುಷ್ಯನನ್ನು ವೈಯಕ್ತಿಕ ಕಾನೂನುಗಳು ಹಲವು ಹತ್ತು ವಿಧಗಳಲ್ಲಿ ಘನತೆಯಿಂದ ನಡೆಸಿಕೊಳ್ಳುವುದಿಲ್ಲ. ಏಕರೂಪ ನಾಗರಿಕತೆ ಸಂಹಿತೆಯ ಬಹುಮುಖ್ಯ ಗುರಿಯಾಗಿದೆ.ಯಾವುದೇ ಧರ್ಮದಿಂದ ಇದನ್ನು ವಿಭಜಿಸದೇರಾಷ್ಟ್ರೀಯತೆಯಿಂದ ಒಂದಾಗುವುದು.ಆವಾಗ ಮಾತ್ರ ಏಕರೂಪ ನಾಗರಿಕತೆ ಸಂಹಿತೆಯ ನಡಿಗೆ ಲಿಂಗ ನ್ಯಾಯದ ಕಡೆಗೆ ಸಾಗಲು ಸಾಧ್ಯವಾಗುತ್ತದೆ.

### ಗ್ರಂಥಸೂಚಿ


1. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ–12, 2015
2. ದುರ್ಗಾದಾಸ್ ಬಸು, ಭಾರತೀಯ ಸಂವಿಧಾನ ಪರಿಚಯ, 2013
3. ಪೈಲಿ.ಎಂ.ವಿ, ಭಾರತದ ಸಂವಿಧಾನ, 1962
4. ಪೈಲಿ.ಎಂ.ವಿ, ಭಾರತೀಯ ಸಂವಿಧಾನಿಕ ಸರ್ಕಾರ, 1978
5. ರಾಜಶೇಖರ.ಎಚ್.ಎಂ, ಭಾರತ ಸಂವಿಧಾನ ಮತ್ತು ಸರ್ಕಾರ, 2023
6. Anusha Soni, Law Commission Chairman on Uniform Civil Code: Each religion would continue to have personal laws.
7. Madhushala, Need for Uniform Civil Code in India: A human rights perspective.
8. Raya Hazarika, Should India have a Uniform Civil Code?
9. Saumya Saxena, Women's rights shouldn't get lost in the uniform civil code vs. personal law debate.
10. Shishir Tripathi, Uniform Civil Code debate focuses on Muslim law but ignores other communities: Fluvial Agnes
11. Venkaiah Naidu.M, Why not a common civil code for all
12. Verghese.BG, Who’s afraid of a Uniform Civil Code.